**ದಿಃ01.09.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ .ಕೆ.ಎಂ.ಕೆ ವಕೀಲರಿಂದ ಃ**

ನನ್ನ ಗಂಡ ಪಳಂಗಪ್ಪ ಇವರು 2003 ರಲ್ಲಿ ತೀರಿಕೊಂಡಿರುತ್ತಾರೆ. ನಾನು ಮತ್ತು ನನ್ನ ಮಕ್ಕಳು ಗೋಣಿಕೊಪ್ಪದಲ್ಲಿ 2009 ರಿಂದ ವಾಸಮಾಡುತ್ತಿದ್ದೇವೆ. 2009 ರಿಂದ 1ನೇ ಪ್ರತಿವಾದಿ ಜೊತೆ ನಾನು ಮತ್ತು ನನ್ನ ಮಕ್ಕಳು ವಾಸ ಇಲ್ಲ ಎಂದರೆ ಸಾಕ್ಷಿ ಬರುತ್ತಾ ಹೋಗುತ್ತಾ ಇದ್ದೇವು ಎನ್ನುತ್ತಾರೆ. 1ನೇ ಪ್ರತಿವಾದಿ ತನ್ನ ಜೀವಿತಾವಧಿಯಲ್ಲಿ ತನ್ನ ಪರವಾಗಿ ವಕೀಲರನ್ನು ನೇಮಿಸಿಕೊಂಡು ಈ ದಾವೆಯನ್ನು ನಡೆಸುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆಯಲ್ಲಿ ಲಿಖಿತ ಹೇಳಿಕೆ ದಾಖಲಿಸಲು 1ನೇ ಪ್ರತಿವಾದಿ ತನ ವಕೀಲರಿಗೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1ನೇ ಪ್ರತಿವಾದಿಯೇ  ಈ ದಾವೆಯ ಸುನಾವಣೆ ಕಾಲಕ್ಕೆ ಹಾಜರಾಗುತ್ತಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತೀರಿಕೊಳ್ಳುವವರಿಗೆ ಆರೋಗ್ಯವಂತರಾಗಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತೀರಿಕೊಳ್ಳುವವರಿಗೆ ಅವರಿಗೆ ಯಾವುದೇ ಆರೋಗ್ಯ ಸಮಸ್ಯೆ ಇರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಅವರಿಗೆ ಯಾವುದೇ ಕಾಯಿಲೆ ಇರಲಿಲ್ಲ ಆದರೆ ಕಣ್ಣು ಕಾಣುತ್ತಿರಲಿಲ್ಲ ಮತ್ತು ಸ್ವಲ್ಪ ಜ್ಞಾಪನಾ ಶಕ್ತಿ  ಕಡಿಮೆ ಇತ್ತು ಎನ್ನುತ್ತಾರೆ. 1ನೇ ಪ್ರತಿವಾದಿ ಇವರಿಗೆ ಅವರ ಜೀವಿತಾವಧಿಯಲ್ಲಿ ಕಣ್ಣು ಸ್ಪಷ್ಟವಾಗಿ ಕಾಣುತ್ತಿತ್ತು ಮತ್ತು ಜ್ಞಾಪಾನ ಶಕ್ತಿ ಸ್ಪಷ್ಟವಾಗಿತ್ತು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತನ್ನ

ವಕೀಲರಿಗೆ ಮಾಹಿತಿ ನೀಡಿ ನಿಡಿ.10 ನ್ನು ಬರೆಸಿದ್ದಾರೆ ಎಂದರೆ ಸರಿಯಲ್ಲ. ನಿಡಿ.10 ರಲ್ಲಿ ಇರುವ ಸಹಿಗಳು ನನ್ನ ಮಾವನಿಗೆ ಸೇರಿದ ಸಹಿಗಳು ಎಂದರೆ ಸಾಕ್ಷಿ ಅವು ನಕಲಿ ಸಹಿ ಇರಬಹುದು ಅವರಿಗೆ ಕಣ್ಣು ಕಾಣುತ್ತಿರಲಿಲ್ಲ ಎನ್ನುತ್ತಾರೆ. 2016-17 ರ ಸಾಲಿನಲ್ಲಿ ನಿಮ್ಮ ಮಾನ ಅಯ್ಯಣ್ಣ ಯಾವ ರೀತಿ ಸಹಿ ಮಾಡುತ್ತಿದ್ದರು ಎಂದು ನಿಮಗೆ ಗುರುತಿಸಲು ಸಾಧ್ಯನಾ ಎಂದರೆ ಸಾಕ್ಷಿ ನನಗೆ ಗುರುತಿಸಲು ಸಾಧ್ಯವಿಲ್ಲ ಎನ್ನುತ್ತಾರೆ. ನನ್ನ ಮಾವ ಅಯ್ಯಣ್ಣ ಇವರು 2015-16 ರ ಅಥವಾ 2016-17 ರಲ್ಲಿ ಸಹಿ ಮಾಡಿದ ಬೇರೆ ಯಾವುದೇ ದಾಖಲೆಗಳು ನನ್ನ ಬಳಿ ಇಲ್ಲ. 2015-16 ಮತ್ತು 2016-17 ರ ಸಾಲಿನಲ್ಲಿ ನನ್ನ ಮಾವ ಯಾವ ರೀತಿ ಸಹಿ ಮಾಡುತ್ತಿದ್ದರು ಎಂದು ನಾನು ಬೇರೆಯಾವುದೇ ದಾಖಲೆಯನ್ನು ನೋಡಿಲ್ಲ. ಸಾಕ್ಷಿಗೆ ನಿಡಿ.10 ನ್ನು ತೋರಿಸಿ ಅದರ ಮೇಲಿರುವ ಫೋಟೋ ಯಾರದು ಎಂದರೆ ಸಾಕ್ಷಿ ನನಗೆ ಅದನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ.ನಿಮ್ಮ ಮಾವನ ಫೋಟೋ ನಿಮ್ಮ ಬಳಿ ಇದೇಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ.10 ನನ್ನ ಮಾವ ಬರೆದಿರುವ ಕೊನೆಯ ಉಹಿಲು ಪತ್ರ ಎಂದರೆ ಸಾಕ್ಷಿ ನಾನು ಒಪ್ಪಲ್ಲ ಎನ್ನುತ್ತಾರೆ. ನನ್ನ ಮಾವನ ಕೋರಿಕೆ ಮೇರೆಗೆ ಸಿ.ಡಿ ಈರಪ್ಪ ಮತ್ತು ಬಿ.ಎಸ್ ಸತೀಶ್ ನಿಡಿ.10 ರ ಮೇಲೆ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ನಾನು ಅದನ್ನು ಒಪ್ಪಲ್ಲ ಎನ್ನುತ್ತಾರೆ. ನಿಡಿ.10 ರಲ್ಲಿ ತೋರಿಸಿರುವ ಆಸ್ತಿಗಳು ನನ್ನ ಮಾವ ಅಯ್ಯಣ್ಣ ಇವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ

ಬರೆದಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಮಾವ ನಿಡಿ.10 ರಂತೆ ಉಹಿಲು ಬರೆದಿದ್ದರು ಮತ್ತು ಆ ವಿಚಾರ ನನಗೆ ಮಾಹಿತಿ ಇದ್ದರು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.